# ಭಾವನಾ ಹೊಸ ಪಲ್ಲವಿ

**‘ದಯವಿಟ್ಟು ಗಮನಿಸಿ’ ಭಾವನಾ ರಾವ್ ನಟನೆಯ ಹೊಸ ಚಿತ್ರಗಳಲ್ಲೊಂದು. ಈ ಶೀರ್ಷಿಕೆ ಅವರ ವೃತ್ತಿಜೀವನದ ಹೊಸ ನಿರೀಕ್ಷೆಗಳ ಮೂರ್ತರೂಪವೂ ಹೌದು.**



ಭಾವನಾ ರಾವ್ ಕನ್ನಡದ ಪ್ರತಿಭಾನ್ವಿತ ನಟಿಯರಲ್ಲೊಬ್ಬರು. ‘ಗಾಳಿಪಟ’ ಚಿತ್ರದಲ್ಲಿನ ಅವರ ತುಂಟತನ ಮಿಶ್ರಿತ ಭಾವುಕ ಅಭಿನಯ ಹಾಗೂ ಕಣ್ಣುಗಳಲ್ಲಿ ಕೊಳದ ಕಂಪನವನ್ನು ತುಂಬಿಕೊಂಡಂತೆ ಹಾಡಿ ಕುಣಿದದ್ದು ಸಹೃದಯರ ಗಮನಸೆಳೆದಿತ್ತು. ನಂತರದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು ಬಿಟ್ಟರೆ ಭಾವನಾ ಗಾಂಧಿನಗರದಲ್ಲಿ ಕಾಣಿಸಿಕೊಂಡಿದ್ದು ಕಡಿಮೆ. ಈಗ ಒಮ್ಮೆಗೇ ಮೂರು ಸಿನಿಮಾಗಳಲ್ಲಿ ಅವರು ಅವಕಾಶ ಪಡೆದಿದ್ದಾರೆ.

‘ನಾನು ಚಿತ್ರರಂಗದಿಂದ ದೂರವಾಗಿರಲಿಲ್ಲ. ಒಳ್ಳೆಯ ಪಾತ್ರಗಳ ನಿರೀಕ್ಷೆಯಲ್ಲಿದ್ದೆ’ ಎನ್ನುವ ಅವರಿಗೆ, ರೋಹಿತ್ ಪದಕಿ ನಿರ್ದೇಶನದ ‘ದಯವಿಟ್ಟು ಗಮನಿಸಿ’ ಚಿತ್ರದ ಪಾತ್ರ ಖುಷಿ ಕೊಟ್ಟಿದೆ. ಈ ಚಿತ್ರದಲ್ಲಿ ಅವರದು ಹತಾಶ ಗೃಹಿಣಿಯ ಪಾತ್ರ. ಕುಟುಂಬದಲ್ಲಿನ ಸಣ್ಣಪುಟ್ಟ ಸಂಗತಿಗಳಿಗೆ ಸಹನೆ ಕಳೆದುಕೊಂಡು ಕೊರಗುವ ಪಾತ್ರ ಅವರದು. ರಘು ಮುಖರ್ಜಿ ಚಿತ್ರದಲ್ಲಿ ಅವರ ಗಂಡನಾಗಿ ಕಾಣಿಸಿಕೊಂಡಿದ್ದಾರೆ. ಈ ಪಾತ್ರ ಸಿನಿಮಾದಾಚೆಗೆ ಹೆಣ್ಣುಮಕ್ಕಳ ಬಹುದೊಡ್ಡ ಸಮೂಹವನ್ನು ಪ್ರತಿನಿಧಿಸುತ್ತದೆ ಎನ್ನುವ ನಂಬಿಕೆ ಅವರದು. ಹೊಸ ತಲೆಮಾರಿನ ಬದುಕಿನ ತವಕ ತಲ್ಲಣಗಳನ್ನು ಕಟ್ಟಿಕೊಡುವ ಪ್ರಯತ್ನದ ಈ ಸಿನಿಮಾದ ಹಾಡುಗಳು ಈಗಾಗಲೇ ಚಿತ್ರರಸಿಕರ ಗಮನಸೆಳೆದಿವೆ.

‘ದಯವಿಟ್ಟು ಗಮನಿಸಿ’ ಸಿನಿಮಾ ಭಾವನಾ ಪಾಲಿಗೆ ಹಿತವಾದ ಅನುಭವವಾಗಿ ಪರಿಣಮಿಸಿದೆ. ನಿರ್ದೇಶಕ ರೋಹಿತ್ ಪದಕಿ ಸಿನಿಮಾ ಕಟ್ಟುವ ಶೈಲಿ ಅವರಿಗಿಷ್ಟವಾಗಿದೆ. ಚಿತ್ರೀಕರಣಕ್ಕೆ ಮುನ್ನ ಸಾಕಷ್ಟು ಸಿದ್ಧತೆಗಳನ್ನು ನಡೆಸಿದ್ದ ರೋಹಿತ್, ಕಲಾವಿದರು ತಮ್ಮ ಪಾತ್ರಗಳಿಗೆ ಮಾನಸಿಕವಾಗಿ ಸಿದ್ಧಗೊಳ್ಳಲು ಅನುವು ಮಾಡಿಕೊಟ್ಟಿದ್ದರಂತೆ. ಇದರಿಂದಾಗಿ ಸಿನಿಮಾ ಚೆನ್ನಾಗಿ ಮೂಡಿಬಂದಿದೆ ಎನ್ನುವ ಅನಿಸಿಕೆ ಅವರದು.

ದಯಾಳ್ ನಿರ್ದೇಶನದ ‘ಸತ್ಯ ಹರಿಶ್ಚಂದ್ರ’ ಭಾವನಾ ನಟಿಸುತ್ತಿರುವ ಇನ್ನೊಂದು ಸಿನಿಮಾ. ಶರಣ್ ಈ ಚಿತ್ರದ ನಾಯಕ. ಶರಣ್ ಸಿನಿಮಾ ಎಂದ ಮೇಲೆ ಮನರಂಜನೆಗೆ ಹೆಚ್ಚು ಒತ್ತು. ಸುಳ್ಳುಗಳ ತಳಹದಿಯ ಮೇಲೆ ಈ ರಂಜನೆಯ ಸೌಧ ನಿಂತಿದ್ದರೂ, ಅಂತಿಮವಾಗಿ ಸತ್ಯಮೇವ ಜಯತೇ ಎನ್ನುವ ಸಂದೇಶ ಚಿತ್ರದಲ್ಲಿದೆಯಂತೆ. ಬದುಕಿನಲ್ಲಿ ಸರಳತೆ ಉಳಿಸಿಕೊಂಡಿರುವ ನಾಯಕ, ತನಗೆದುರಾದ ಸವಾಲು–ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾನೆ ಎನ್ನುವುದು ಚಿತ್ರದ ಕಥೆ. ಈ ಕಥನದಲ್ಲಿ ತಮ್ಮ ಪಾತ್ರಕ್ಕೂ ಸಾಕಷ್ಟು ಪ್ರಾಮುಖ್ಯತೆಯಿದೆ ಎಂದು ಭಾವನಾ ಅವರಿಗೆ ಅನ್ನಿಸಿದೆ. ಆಧುನಿಕ ಹರಿಶ್ಚಂದ್ರನ ಈ ಸಿನಿಮಾದ ಶೂಟಿಂಗ್ ಮುಗಿದಿದ್ದು, ತೆರೆಕಾಣುವ ಸಿದ್ಧತೆ ನಡೆಸುತ್ತಿದೆ.

ಭಾವನಾ ನಟನೆಯ ಇನ್ನೊಂದು ಸಿನಿಮಾ ‘ಗಾಂಧಿಗಿರಿ’. ರಾಗಿಣಿ ದ್ವಿವೇದಿ ಈ ಚಿತ್ರದ ನಾಯಕಿಯಾದರೂ, ಕಥೆಯಲ್ಲಿ ತಮ್ಮ ಪಾತ್ರಕ್ಕೂ ಮಹತ್ವವಿರುವುದರಿಂದ ಸಿನಿಮಾ ಒಪ್ಪಿಕೊಂಡಿರುವೆ ಎನ್ನುತ್ತಾರೆ ಭಾವನಾ. ಪಾತ್ರ ಇಷ್ಟವಾದಲ್ಲಿ ನಾಯಕಿಯ ಪಾತ್ರಕ್ಕೆ ಕಟ್ಟುಬೀಳದಿರುವ ನಿಲುವು ಅವರದು. ಪಾತ್ರ ಪುಟ್ಟದಾದರೂ ಅದು ಪ್ರೇಕ್ಷಕರ ಮನಸಿನ ಮೇಲೆ ಬೀರಬಹುದಾದ ಪರಿಣಾಮದ ಬಗ್ಗೆ ಅವರ ಗಮನ.

ಸದ್ಯಕ್ಕೆ ರೋಹಿತ್‌ರ ‘ದಯವಿಟ್ಟು ಗಮನಿಸಿ’ ಹಾಗೂ ಶರಣ್‌ರ ‘ಸತ್ಯ ಹರಿಶ್ಚಂದ್ರ’ ತೆರೆಗೆ ಸಿದ್ಧವಾಗಿವೆ. ಒಂದು ಹೊಸ ಪ್ರತಿಭೆಗಳ ಸಿನಿಮಾ, ಇನ್ನೊಂದು ಪಳಗಿದ ತಂಡದೊಂದಿಗಿನ ಚಿತ್ರ. ಈ ಎರಡೂ ಚಿತ್ರಗಳು ಗಾಂಧಿನಗರದಲ್ಲಿ ಕುತೂಹಲ ಕೆರಳಿಸಿವೆ. ಇವುಗಳ ಗೆಲುವು ಭಾವನಾ ಅವರ ಮುಂದಿನ ನಡೆಗಳನ್ನು ನಿಚ್ಚಳಗೊಳಿಸಬಹುದು.

■ **ರಘು**